ವಿಷಯ:- ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೆ ಪ್ರಾಚಾರ್ಯರ ಹುದ್ದೆಗೆ ಬಡ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 252(440)

ಶ್ರೀ ಮೊಡಗೇಕರ್ ದೇಸಾಯಿ(ಹಿರೇಬಾಗೇವಾಡಿ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸುಮಾರು 18 ವರ್ಷಗಳಿಂದ ಸೇವೆಸಲ್ಲಿಸಿದ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೆ ಪ್ರಾಚಾರ್ಯರ ಹುದ್ದೆಗೆ ಬಡ್ತಿ ನೀಡದಿರಲು ಕಾರಣವೇನು? (ಬೆಳಗಾಂ ಜಿಲ್ಲೆಯ ಖಾಲಿ ಹುದ್ದೆಗಳ ವಿವರ ನೀಡುವುದು)

2) ಈ ಪ್ರಾಚಾರ್ಯರ ಹುದ್ದೆ ಭರ್ತಿ ಮಾಡದಿದ್ದರಿಂದ ಕಾಲೇಜಿನ ಆಡಳಿತಕ್ಕೆ ವ್ಯವಸ್ಥಿತವಾಗಿ ನಡೆಯುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಉಪನ್ಯಾಸಕರ ವೃಂದದಿಂದ ಪ್ರಾಚಾರ್ಯರ ವೃಂದಕ್ಕೆ ಸೇವಾ ಜೇಷ್ಠತಾ ಆಧಾರ ಮತ್ತು ನೇಮಕಾತಿ ನಿಯಮದ ಮೇರೆಗೆ ಬಡ್ತಿ ನೀಡಲಾಗುತ್ತಿದೆ. (ಬೆಳಗಾಂ ಜಿಲ್ಲೆ ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ)

1) ನೇಜ, ಚಿಕ್ಕೋಡಿ ತಾಲ್ಲೂಕು

2) ವಕ್ಕುಂಡ

3)

4) ಚಿಂತಾಮಣಿರಾವ್, ಶಹಪುರ ಬೆಳಗಾಂ.

ಇಲ್ಲ

ಈ ಖಾಲಿ ಇರುವ ಕಾಲೇಜಿನ ಪ್ರಾಚಾರ್ಯರ ಕಾರ್ಯಭಾರವನ್ನು (ಹಳೇ ಕಾಲೇಜು)ಅಲ್ಲಿನ ಹಿರಿಯ ಉಪನ್ಯಾಸಕರು ನಿರ್ವಹಿಸುತ್ತಾರೆ. ಹೊಸ ಕಾಲೇಜಿನ ಪ್ರಾಚಾರ್ಯರ ಕಾರ್ಯಭಾರವನ್ನು ಅಲ್ಲಿನ ಮುಖ್ಯೋಪಧ್ಯಾಯರೇ ನಿರ್ವಹಿಸುತ್ತಿದ್ದಾರೆ. (91-92, 92-93ರಿಂದ ಪ್ರಾರಂಭ) ಆದುದರಿಂದ ಕಾಲೇಜಿನ ಕೆಲಸ ಕಾರ್ಯಕ್ಕೆ ತೊಂದರೆಯಾಗುತ್ತಿಲ್ಲ.

ವಿಷಯ:- ಬೆಳಗಾವಿ ತಾಲ್ಲೂಕಿನಲ್ಲಿರುವ ಎಲ್ಲಾ ಪಶುವೈದ್ಯ ಸಂಸ್ಥೆಗಳಿಗೆ ಔಷಧಿಗಳ ಸರಬರಾಜು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 253(441)

ಶ್ರೀ ಮೊಡಗೇಕರ್ ದೇಸಾಯಿ(ಹಿರೇಬಾಗೇವಾಡಿ)

ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1993-94ನೇ ಸಾಲಿನಲ್ಲಿ ಖಾನಾಪುರ ಮತ್ತು ಬೆಳಗಾವಿ ತಾಲ್ಲೂಕಿನಲ್ಲಿರುವ ಎಲ್ಲ ಪಶುವೈದ್ಯ ಸಂಸ್ಥೆಗಳಿಗೆ ಸರಬರಾಜು ಮಾಡಿರುವ ಔಷಧಿಗಳ ಮೊತ್ತವೆಷ್ಟು? (ಪಶುವೈದ್ಯ ಆಸ್ಪತ್ರೆವಾರು ವಿವರಗಳನ್ನು ನೀಡುವುದು)

ಆ) ರಾಜ್ಯಾದಂತ ಜಾನುವಾರುಗಳಿಗೆ ಕ್ರಮ ಪ್ರಕಾರವಾಗಿ ಈ ಪಶುವೈದ್ಯ ಆಸ್ಪತ್ರೆಗಳಲ್ಲಿ ಔಷಧಿಗಳ ಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ದಾಸ್ತಾನಿನ ಕೊರತೆಯಿಂದ ಮತ್ತು ಸಾಲದೇ ಇರುವ ಔಷಧಿಗಳಿಂದ ರೈತರಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು?

ಶ್ರೀ ಕೆ.ಎನ್.ನಾಗೇಗೌಡ

(ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

ಖಾನಾಪುರ ತಾಲ್ಲೂಕಿನ ಪಶುವೈದ್ಯ ಸಂಸ್ಥೆಗಳಿಗೆ ರೂ. 1,07,796-00 ಬೆಳಗಾವಿ ತಾಲ್ಲೂಕಿನ ಪಶುವೈದ್ಯ ಸಂಸ್ಥೆಗಳಿಗೆ : ರೂ. 1,56,444-00 (ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ)

ಇಲ್ಲಾ

ಬಂದಿದೆ

ಔಷಧಿ : ರಾಸಾಯನಿಕಗಳನ್ನು ಕೊಳ್ಳಲು ಹೆಚ್ಚಿನ ವಂಟನವನ್ನು ಕೊಡಲು ಸರ್ಕಾರ ಪರಿಗಣಿಸುತ್ತಿದೆ.

ಅನುಬಂಧ-1

ಕ್ರ. ಸಂ.	ಸಂಸ್ಥೆಗಳ ಹೆಸರು	ರಾಜ್ಯ ವಂಟನದ ಅಡಿಯಲ್ಲಿ ರೂ:	ಜಿಲ್ಲಾ ಪರಿಷತ್ ರವರ ವತಿಯಿಂದ ರೂ.	: ರೂ:
ಎ) ಖಾನಾಪುರ ತಾಲ್ಲೂಕ್				
1)	ಪಶು ಆಸ್ಪತ್ರೆ ಕಾನಾಪುರ	71,485-00	-	
2)	ಪ್ರಾ.ಪ.ಚಿ. ನಂದಗಡ್	2,821-00	-	
3)	" ಇಟಗಿ	2,844-00	-	
4)	" ಜಂಬೂಟಿ	2,923-00		
5)	" ಕಣಕುಂಬಿ	2,844-00	-	
6)	" ಹಲಸಿ	2,844-00	-	
7)	" ಕಕ್ಕೇರಿ	2,883-00	-	
8)	" ಜೈಡಿ	2,883-00	-	
9)	" ಲೋಂಡ	2,731-00		
10)	" ಪರಶುವಾಡ	2,546-00	581-00	
11)	" ಗರ್ಲ್‌ಗುಂಜಿ	1,411-00	-	
	ಒಟ್ಟು	**98,215-00**	**9,581-00**	**1,07,796-00**

ಕ್ರ. ಸಂ.	ಸಂಸ್ಥೆಗಳ ಹೆಸರು	ರಾಜ್ಯ ವಂಟನದ ಅಡಿಯಲ್ಲಿ ರೂ:	ಜಿಲ್ಲಾ ಪರಿಷತ್ ರವರ ವತಿಯಿಂದ ರೂ.	ನಿವ್ವಳಮೊತ್ತ ರೂ:
ಬಿ) ಬೆಳಗಾವಿ ತಾಲ್ಲೂಕು				
1)	ಪಶುಚಿಕಿತ್ಸಾಲಯ, ಹಿರೆಬಾಗೇವಾಡಿ	29,459-00		
2)	" ಶಂಬರ	30,479-00		
3)	ಪಶು ಆಸ್ಪತ್ರೆ ,ಬೆಳಗಾವಿ	31,586-00	-	
4)	ಪ್ರಾ.ಪ.ಚಿ.ಹೂಡ್ಲಿ	4,302-00	-	
5)	-"- ಯಲ್ಲೂರು	7,319-00	-	
6)	-"- ಅನಗೋಳ	8,756-00	-	
7)	-"- ಉಚ್ಚಗಾಂ	9,313-00	9,692-00	
8)	-"- ಬೆಳಗುಂದಿ	8,619-00	-	
9)	-"- ನಂದಿಹಾಳ್	7,600-00	-	
10)	-"- ಸಂತೇಬಸವಾಡ್	9,319-00	-	
	ಒಟ್ಟು	**1,46,752-00**	**9,692-00**	**1,56,444-00**

ವಿಷಯ:- ಬೆಳಗಾವಿ ಜಿಲ್ಲೆಯ ಮುಚ್ಚಂಡಿ ಹಲಗೆ ತಾರಿ ಹಾಳ್ ಮತ್ತು ಕಾಕ್ತಿ ಗ್ರಾಮದ ರೈತರಿಗೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವಿಲ್ಲದೆ ತೊಂದರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 254(442)

ಶ್ರೀ ಮೊಡಗೇಕರ್ ದೇಸಾಯಿ(ಹಿರೇಬಾಗೇವಾಡಿ)

ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಮುಚ್ಚಂಡಿ, ಹಲಗೆ ತಾರಿ ಹಾಳ್ ಮತ್ತು ಕಾಕ್ತಿ ಗ್ರಾಮದ ರೈತರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಲ್ಲದೆ ತೊಂದರೆಯನ್ನು ಅನುಭವಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಮೇಲ್ಕಂಡ ಗ್ರಾಮಗಳಲ್ಲಿ ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ತೆರೆಯಲು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

ಹೌದು.

ಸರ್ಕಾರದ ಮಂಜೂರಾತಿ ನೀಡುವ ಸಮಯದಲ್ಲಿ ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದು.

ವಿಷಯ:- ಚೆನ್ನಪಟ್ಟಣದ ಎ.ಸಿ.ಎಫ್. ಕಛೇರಿಯ ವರ್ಗಾವಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 255(163)

ಶ್ರೀ ಬಿ.ಆರ್.ಗುರುದೇವ್ (ಸಕಲೇಶಪುರ)